www.ecourtsindia.com



ಮೂಲ ದಾವಾ ಸಂಖ್ಯೆ 109/2021

ಪಿ ಡಬ್ಲ್ಯೂ-3

**(ದಿನಾಂಕ 25.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ T.R.S. ವಕೀಲರಿಂದಃ-**

ದೇವಲಾ ತಿಮಲಾಪುರದ ಬಸವನಕೋಟೆ ದೊಡ್ಡ ಕೊಟ್ರಪ್ಪ ಮತ್ತು ಯಲ್ಲಪ್ಪ ಗೊತ್ತು. ಅವರಿಬ್ಬರೂ ಬಸವನಕೋಟೆ ಬಸ್ಸಪ್ಪನ ಮಕ್ಕಳು ಎಂದರೆ ಸರಿ. ದಾವೆಯನ್ನು ಯಾರು ಯಾರ ವಿರುದ್ಧ ಹಾಕಿದ್ದಾರೆ ಎಂದರೆ ಬಸ್ಸಪ್ಪ ಬಸ್ಸಮ್ಮನ ವಿರುದ್ಧ ಹಾಕಿರುತ್ತಾರೆ. ದೊಡ್ಡ ಕೊಟ್ಟಪ್ಪನ ತಮ್ಮ ಯಲ್ಲಪ್ಪ. ಯಲ್ಲಪ್ಪನ ಹೆಂಡತಿ ಹೆಸರು ಗೊತ್ತಿಲ್ಲಾ. ಸದರಿಯವರಿಗೆ ಕೊಟ್ರೇಶ ಅಜ್ಜಪ್ಪ ಶಕುಂತಲಾ ಅಂತಾ ಮೂರು ಜನ ಮಕ್ಕಳು ಎಂದರೆ ಸರಿ. ಶಕುಂತಲಾ ರವರನ್ನು ಗುತ್ತೂರಿನ ಕುಮಾರಪ್ಪನಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲಾ. ಯಲ್ಲಪ್ಪನಿಗೆ ಶಕುಂತಮ್ಮ ಒಬ್ಬಳೇ ಮಗಳು ಎಂದರೆ ಗೊತ್ತಿಲ್ಲಾ. ಸಾಕ್ಷಿ ಪ್ರಮಾಣ ಪತ್ರ ಬರೆಯಲು ಯಾರು ಮಾಹಿತಿ ಕೊಟ್ಟರು ಗೊತ್ತಿಲ್ಲಾ. ಪಕ್ಷಗಾರರು ಗೊತ್ತು. ವಾದಿ ರೇಣುಕಮ್ಮನ ಚಿಕ್ಕಪ್ಪನ ಮಗಳನ್ನು ನಾನು 45 ವರ್ಷ ಹಿಂದೆ ಮದುವೆ ಆಗಿರುತ್ತೇನೆ ಅಂತಾ ರೇಣುಕಮ್ಮನ ಕಡೆಯವರು ಬರೆಸಿರುತ್ತಾರೆ. ಯಲ್ಲಪ್ಪನ ಮಗಳು ಶಕುಂತಲಮ್ಮ ಎಂದರೆ ಸರಿ. ಸದರಿ ಶಕುಂತಲಮ್ಮ ನನ್ನ ಹೆಂಡತಿ ಅಲ್ಲಾ ಎಂದರೆ ಸರಿ. ವಾದಿ ರೇಣುಕಮ್ಮನ ಚಿಕ್ಕಪ್ಪನ ಮಗಳನ್ನು ನಾನು 45 ವರ್ಷ ಹಿಂದೆ ಮದುವೆ ಆಗಿರುತ್ತೇನೆ ಅಂತಾ ಬರೆಸಿರುವುದು ಸುಳ್ಳು ಎಂದರೆ ಸರಿ. ಸದರಿ ಶಕುಂತಮ್ಮಳಿಗೆ 38 ವರ್ಷ ಎಂದರೆ ಗೊತ್ತಿಲ್ಲಾ. ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಮದುವೆ ಆದಾಗ ನನ್ನ ಮಾವ ಯಲ್ಲಪ್ಪನ ತಂದೆ ಬಸ್ಸಪ್ಪ ಜೀವಂತ ಇದ್ದರು ಅಂತಾ ಬರೆದಿದೆ ಎಂದರೆ ನಾನು ಬರೆಸಿಲ್ಲಾ. ಜಮೀನು ಮಾರಿ ಬಂದ ಹಣ ದಿಂದ ಅಡವಿಹಳ್ಳಿ ಗ್ರಾಮದ ಜಮೀನನ್ನು ಬಸವನಕೋಟೆ ಬಸ್ಸಪ್ಪ ಖರೀದಿಸಿದ್ದರು ಅಂತಾ ಹೇಳಿ ನಾನು ಬರೆಸಿಲ್ಲಾ.

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-5.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

ಬಸವನಕೋಟೆ ಬಸ್ಸಪ್ಪನ ಮಕ್ಕಳು ದೊಡ್ಡ ಕೊಟ್ರಪ್ಪ ಮತ್ತು ಯಲ್ಲಪ್ಪ ಬಹಳ ಚಿಕ್ಕವರಿದ್ದಾಗಲೇ ಬಸವನಕೋಟೆಯಲ್ಲಿ ಮರಣ ಹೊಂದಿದ್ದರು ಎಂದರೆ ಸರಿ. ಬಸವನಕೋಟೆ ಕೊಟ್ರಪ್ಪನ ಮನೆತನದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಎಂದರೆ ಸರಿ. ರೇಣುಕಮ್ಮನ ಗಂಡ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-5.pdf

**(ದಿನಾಂಕ 25.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ T.R.S. ವಕೀಲರಿಂದಃ-**

ನಾನು ಹಾಲೇಕಲ್ಲಿನಲ್ಲಿ ಜಮೀನು ಹೊಂದಿದ್ದು ವ್ಯವಸಾಯ ಮಾಡುತ್ತೇನೆ. ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವೆಯನ್ನು ರೇಣುಕಮ್ಮ ಅವರ ತಂದೆಯ ವಿರುದ್ಧ ಹೂಡಿರುತ್ತಾರೆ. ಕಳ್ಳಿರ ಸಿದ್ದಪ್ಪ ನಮ್ಮ ಕೆಲಸಕ್ಕೆ ಬರುತ್ತಾರೆ. ನಮ್ಮ ಜಮೀನು ಅವರೇ ನೋಡಿಕೊಳ್ಳುತ್ತಾರೆ. ನನಗೆ ನ್ಯಾಯಾಲಯ ದಿಂದ ಸಮನ್ಸ ಬಂದಿರುವುದಿಲ್ಲಾ ವಕೀಲರುವು ಕರೆದುಕೊಂಡು ಬಂದಿರುತ್ತಾರೆ. ಕಳ್ಳಿರ ಸಿದ್ದಪ್ಪನ ಜೋತೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು 6-7 ವರ್ಷ ದಿಂದ ದಾವಣಗೆರೆ ವಾಸವಾಗಿರುತ್ತೇನೆ. ದೇವರ ತಿಮಲಾಪುರ ಗ್ರಾಮ ನೋಡಿರುತ್ತೇನೆ. ದೇವರ ತಿಮಲಾಪುರದಲ್ಲಿ ನಮ್ಮ ಸಂಬಂಧಿಕರು ಯಾರು ಇಲ್ಲಾ. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾದಿ ಮತ್ತು ಅವರ ಗಂಡ ಮತ್ತು ಸಾಕ್ಷಿ ನುಡಿದಿದ್ದ ವಾದಿ ಸಾಕ್ಷಿ 2 ನಮ್ಮ ಹತ್ತಿರ 40 ವರ್ಷ ದಿಂದ ಕೆಲಸಕ್ಕೆ ಬರುತ್ತಿದ್ದರು. ಸದರಿ ವಿಶ್ವಾಸ ದಿಂದ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ದೊಡ್ಡ ಕೊಟ್ರಪ್ಪ ಯಲ್ಲಪ್ಪ ರವರ ಮನೆ ತನದ ಬಗ್ಗ ಮತ್ತು ಅವರು ನ್ಯಾಯಾಲಯಕ್ಕೆ ಏನು ಪ್ರಾರ್ಥನೆ ಮಾಡಿದ್ದಾರೆಂದು ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ಬಸವನಕೋಟೆ ಬಸ್ಸಪ್ಪನವರು ಯಾವಾಗ ಎಲ್ಲಿ ತೀರಿಕೊಂಡರು ಎಂದರೆ ಗೊತ್ತಿಲ್ಲಾ. ಬಸವನಕೋಟೆ ಬಸ್ಸಪ್ಪ ಜಗಳೂರು ತಾಲೂಕು ಬಸವನಕೋಟೆಯವರು ಎಂದರೆ ಸರಿ. ಬಸವನಕೋಟೆ ಬಸ್ಸಪ್ಪನ ಮಕ್ಕಳು ಚಿಕ್ಕವಯಸ್ಸಿನಲ್ಲಿ ಇದ್ದಾಗಲೇ ತೀರಿಕೊಂಡರು ಎಂದರೆ ಗೊತ್ತಿಲ್ಲಾ. ಬಸವನಕೋಟೆ ಬಸ್ಸಪ್ಪ ಅಡವಿಹಳ್ಳಿ ಯಲ್ಲಿ ಜಮೀನು ಖರೀದಿ ಮಾಡಿದ ವಿಚಾರ ಕೊಟ್ರಪ್ಪ ಹೇಳಿ ನನಗೆ ಗೊತ್ತಾಗಿರುತ್ತದೆ. ಬಸವನಕೋಟೆಯಲ್ಲಿ ಯಾವ ಜಮೀನು

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-5.pdf

ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಬಸವನಕೋಟೆ ದೊಡ್ಡ ಕೊಟ್ರಪ್ಪನವರು ತಮ್ಮ ಜಮೀನು ಮಾರಿ ಬಂದ ಹಣ ದಿಂದ ದೇವರ ತಿಮಲಾಪುರದಲ್ಲಿ ಜಮೀನು ಖರೀದಿಸಿದ್ದರು ಅಂತಾ ನನಗೆ ತಿಳಿಸಿಲ್ಲ ಅಂತಾ ಸೂಚಿಸುವುದು ಸರಿಯಲ್ಲ. ದಾವಾ ಆಸ್ತಿಗಳು ಬಸ್ಸಪ್ಪ ಮತ್ತು ಅವರ ಮಕ್ಕಳು ದುಡಿದ ಆಸ್ತಿ ಅಲ್ಲ ಎಂದರೆ ಗೊತ್ತಿಲ್ಲ. ರೇಣುಕಮ್ಮನ ಗಂಡ ನನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿರುವ ಸಲುವಾಗಿ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KADG410010992021/truecopy/order-5.pdf